ವಿಷಯ (ಬ) : ಬನ್ನೂರು ಕ್ಷೇತ್ರದಲ್ಲಿರುವ ರಸ್ತೆಗಳ ದುರಸ್ತಿ

†**ಶ್ರೀಮತಿ ಜೆ. ಸುನೀತಾ ವೀರಪ್ಪಗೌಡ (ಬನ್ನೂರು)** : ಮಾನ್ಯ ಅಧ್ಯಕ್ಷರೇ, ಟಿ. ನರಸೀಪುರ ತಾಲ್ಲೂಕಿನ ಬನ್ನೂರು ವಿಧಾನಸಭಾ ಕ್ಷೇತ್ರವು ಅನೇಕ ಯಾತ್ರಾಸ್ಥಳಗಳನ್ನು ಮತ್ತು ಪ್ರವಾಸಿ ತಾಣಗಳನ್ನು ಹೊಂದಿದ್ದು ಪ್ರತಿನಿತ್ಯ ಸಾವಿರಾರು ಪ್ರವಾಸಿಗರು ಈ ಕ್ಷೇತ್ರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸುತ್ತಾರೆ. ಪವಿತ್ರ ಪ್ರವಾಸಿ ಕ್ಷೇತ್ರವಾದ ಸೋಮನಾಥಪುರದ ಶ್ರೀ ಚೆನ್ನಕೇಶವ ದೇವಸ್ಥಾನ, ಜಗತ್ಪ್ರಸಿದ್ಧವಾದ ಪಮಚಲಿಂಗ ಯಾತ್ರೆಯ ತಾಣವಾದ ತಲಕಾಡು, ಮಲ್ಲಿಕಾರ್ಜುನ ದೇವಸ್ಥಾನ ಹೊಂದಿರುವ ಮುಡುಕುತೊರೆ ಇತ್ಯಾದಿ ಪವಿತ್ರ ಸ್ಥಳಗಳು ಬನ್ನೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುತ್ತವೆ. ಇವುಗಳಿಂದಾಗಿ ಈ ಕ್ಷೇತ್ರವು ದಕ್ಷಿಣಕಾಶಿಯೆಂದು ಕರೆಯಲ್ಪಟ್ಟು ಇತಿಹಾಸ ಪ್ರಸಿದ್ಧವಾಗಿರುತ್ತದೆ. ಈ ಕ್ಷೇತ್ರದಲ್ಲಿ ಹರಿಯುತ್ತಿರುವ ಕಾವೇರಿ, ಕಪಿಲಾ ಮತ್ತು ಸ್ಫಟಿಕಾ ಸರೋವರಗಳ ಸಮ್ಮಿಳನದಿಂದಾಗಿ ಇದು ಒಂದು ಪವಿತ್ರವಾದಂಥ ಪ್ರದೇಶವಾಗಿದೆ ಮತ್ತು ಬನ್ನೂರು ವಿಧಾನಸಭಾ ಕ್ಷೇತ್ರಕ್ಕೆ ಹೊಂದಿಕೊಂಡಂತೆ ಇರುವ ತಿರುಮಕೂಡಲು ನರಸೀಪುರ ಪ್ರದೇಶದಲ್ಲಿ ಉತ್ತರ ಭಾರತದಲ್ಲಿ ನೆರವೇರುವ ನಾಲ್ಕು ಕುಂಭಮೇಳಗಳಂತೆಯೇ ಪ್ರತಿ ಮೂರು ವರ್ಷಕ್ಕೊಮ್ಮೆ ಕುಂಭಮೇಳ ಎಂಬ ಪವಿತ್ರ ಕಾರ್ಯಕ್ರಮ ಇಲ್ಲಿ ನೆರವೇರುತ್ತದೆ. ಈ ಕಾರ್ಯಕ್ರಮದಲ್ಲಿ ಭಾಗಬಹಿಸಲು ಪ್ರಸಿದ್ಧ ಜಗದ್ಗುರುಗಳು ಹಾಗೂ ಅನೇಕ ಸನ್ಯಾಸಿಗಳು, ಸಾದುಸಂತರು ಹಾಗೂ ದೇಶದಾದ್ಯಂತ ಅನೇಕ ಗಣ್ಯ ವ್ಯಕ್ತಿಗಳು ಮತ್ತು ಇನ್ನಿತರ ಜನಸಾಮಾನ್ಯರು ಈ ಪ್ರದೇಶಕ್ಕೇ ಭೇಟಿನೀಡಿ ಈ ನದಿಗಳ ಸಂಗಮದಲ್ಲಿ ಪುಣ್ಯಸ್ನಾನ ಮಾಡಿ ಪಾವನರಾಗುವುದು ವಾಡಿಕೆಯಾಗಿರುತ್ತದೆ. ಈ ಸಂದರ್ಭದಲ್ಲಿ ಬನ್ನೂರು ವಿಧಾನಸಭಾ ಕ್ಷೇತ್ರದ ರಸ್ತೆಗಳ ಮುಖಾಂತರ ಅನೇಕ ವಾಹನಗಳು ಸಂಚರಿಸುತ್ತವೆ. ಈ ಮೇಲೆ ತಿಳಿಸಲಾದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಈ ಪ್ರದೇಶವನ್ನು ಹಾಯ್ದುಹೋಗುವ ಎಲ್ಲಾ ರಸ್ತೆಗಳನ್ನು ಸುಸ್ಥಿತಿಯಲ್ಲಿಡುವುದು ಅಗತ್ಯವಾಗಿರುತ್ತದೆ. ಗಣ್ಯ ವ್ಯಕ್ತಿಗಳು ಮತ್ತು ಪ್ರವಾಸಿಗರರ ಸಂಚಾರಕ್ಕೆ ಸುಗಮವಾಗುವಂತೆ ಅವುಗಳನ್ನು ಆಗಿಂದಾಗ್ಗೆ ಅಭಿವೃದ್ಧಿಪಡಿಸಿ ನಿರ್ವಹಿಸುವ ಮೂಲಕ ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಿಕೊಡುವುದು ಸರ್ಕಾರದ ಆದ್ಯ ಕರ್ತವ್ಯವಾಗಿರುತ್ತದೆ. ಆದರೆ ಪ್ರತಿವರ್ಷವೂ ಇಪ್ಪತ್ತು-ಮೂವತ್ತು ಲಕ್ಷ ರೂಪಾಯಿಗಳು ಎಂದು ಖರ್ಚುಮಾಡಿ ಯಾವ ರಸ್ತೆಯೂ ಕೂಡ ಪಕ್ಕಾ ರಸ್ತೆಯಾಗಿಲ್ಲ, ಸುಮಾರು ಹದಿನೈದು-ಇಪ್ಪತ್ತು ವರ್ಷಗಳಿಂದಲೂ ಕೂಡ ನಾವು ಇದೇ ಪರಿಸ್ಥಿತಿಯನ್ನು ನೋಡುತ್ತಿದ್ದೇವೆ. ಈ ರಸ್ತೆಗಳು ಯಾವಾಗಲೂ ಕೂಡ ಸರಿಹೋಗಲೇ ಇಲ್ಲ. ಅಲ್ಲಿ ಬಂದವರೆಲ್ಲರೂ ಕುಡ ಇಲ್ಲಿಯ ವಿಧಾನಸಭಾ ಸದಸ್ಯರು ಯಾರು ಎಂದು ಕೇಳುವಂತಹಗ ಪರಿಸ್ಥಿತಿಯನ್ನು ನಾವು ಇದುವರೆಗೂ ನೋಡಿದ್ದೇವೆ. ದಯಮಡಿ ಅಲ್ಲಿ ಪಕ್ಕಾ ರಸ್ತೆಯನ್ನು ತಾವು ಮಾಡಿಸಿಕೊಡಬೇಕು ಮತ್ತು ಸರ್ಕಾರಕ್ಕೆ ನಾಣು ಇನ್ನೊಂದು ಮನವಿಯನ್ನು ಸಲ್ಲಿಸುತ್ತಿದ್ದೇನೆ. ಈಗ ನಮ್ಮಲ್ಲಿ ವಿದ್ಯುತ್ ಕೊರತೆ ಇರುವಾಗ ನನ್ನ ಕ್ಷೇತ್ರದಲ್ಲಿ ಟಿ.ಸಿ.ಗಳು ದಿನನಿತ್ಯ ಸುಟ್ಟುಹೋಗುವಂತಹ ಪರಿಸ್ಥಿತಿ ಇದೆ. ಅಧಿಕಾರಿಗಳನ್ನು ಕೇಳಿದರೆ ಅವರು ಅನಧಿಕೃತವಾಗಿ ಏನು ಐ.ಪಿ. ಸೆಟ್ಟುಗಳನ್ನು ಹಾಕಿಕೊಂಡಿದ್ದಾರೆ, ಅದಕ್ಕೋಸ್ಕರ ಈ ತರಹ ಆಗುತ್ತಿದೆ, ನಾವು ಏನೂ ಮಾಡುವುದಕ್ಕೆ ಆಗುವುದಿಲ್ಲ ಎಂದು ಅವರು ಹೇಳುತ್ತಾರೆ. ದಯವಿಟ್ಟು ಇದನ್ನು ಸರಿಮಾಡಬೇಕು ಮತ್ತು ನನ್ನ ಕ್ಷೇತ್ರದಲ್ಲಿ ಇನ್ನೊಂದು ವಿಚಾರ ಏನೆಂದರೆ, ಕಳೆದವರ್ಷ ಸರಿಯಾದ ಫಲಾನುಭವಿಗಳನ್ನು ಗುರುತಿಸಲಾಗದ ಕಾರಣಕ್ಕೆ ಐದುನೂರು ಆಶ್ರಯ ಮನೆಗಳದ್ದು ಲ್ಯಾಪ್ಸ್ ಆಗಿ ಸರ್ಕಾರದ ಹಣ ವಾಪಸ್ಸು ಬಂದಿದೆ. ಆದ್ದರಿಂದ ಈ ವರ್ಷ ಫಲಾನುಭವಿಗಳಿಗೆ ಅನುಕೂಲವಾಗುವಂತೆ ಐದುನೂರು ಮನೆಗಳನ್ನು ಹೆಚ್ಚುವರಿಯಾಗಿ ನನ್ನ ಕ್ಷೇತ್ರಕ್ಕೆ ಕೊಡಬೇಕೆಂದು ನಾನು ಸರ್ಕಾರದರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ : ಅಧ್ಯಕ್ಷರೇ, ಈ ಕ್ಷೇತ್ರವು ಬಹಳ ಪವಿತ್ರವಾಗಿರುವಂತಹ ದೇವಸ್ಥಾನಗಳು ಮತ್ತು ಪುಣ್ಯ ಕ್ಷೇತ್ರಗಳನ್ನು ಹೊಂದಿದೆ ಎನ್ನುವುದರ ಬಗ್ಗೆ ನಾನು ಒಪ್ಪಿಕೊಳ್ಳುತ್ತೇನೆ. ಮಾನ್ಯ ಶಾಸಕಿಯವರು ಈ ರಸ್ತೆಗಳನ್ನು ಸರಿಪಡಿಸಬೇಕೆಂದು ಹೇಳಿದ್ದಾರೆ. ಖಂಡಿತವಾಗಿಯೂ ಇದರ ಬಗ್ಗೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ. ಇಲ್ಲಿಯವರೆಗೆ ಕೂಡ `Indian Roads are as bad as their Politicians' ಅಂತ ಒಂದು ಮಾತು ಇತ್ತು. ಇದು ಭಾರತದ ರಾಜಕಾರಣಿಗಳಷ್ಟೇ ಭಾರತ ದೇಶದ ರಸ್ತೆಗಳು ಕೆಟ್ಟಿವೆ ಎಂದು ಹಿಂದೆಲ್ಲಾ ಹೇಳುತ್ತಿದ್ದರು. ಆದರೆ ಈಗ ಆ ರೀತಿ ಆಗುತ್ತಿಲ್ಲ. We are now better. Really Indian Politicians are much better than the other politicians of the rest. ಈ ಕಾರಣಕ್ಕಾಗಿ ತಾವು ಹೇಳಿದ ವಿಚಾರದ ಬಗ್ಗೆ ಖಂಡಿತವಾಗಿಯೂ ಗಮನಕೊಟ್ಟು ನಾವು ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಮಾನ್ಯ ಅಧ್ಯಕ್ಷರೇ, ಈ ಎರಡೂ ಸೇತುವೆಗಳು ಬಹಳ ಪ್ರಮುಖವಾದಂಥ ಸೇತುವೆಗಳು. ಒಂದು ಕಾವೇರಿ ಮತ್ತು ಇನ್ನೊಂದು ಕಪಿಲಾ ಸೇತುವೆ. ಇವುಗಳು ಯಾವುದೋ ಬ್ರಿಟೀಷರ ಕಾಲದ್ದಾಗಿದ್ದು ಇವುಗಳ ರಿಪೇರಿ ಆಗಬೇಕೆಂದು ಒಂದೇಸಮನೆ ನಿರಂತರವಾಗಿ ಒತ್ತಾಯ ಇದೆ. ತಾವು ಒಂದೇ ಮಾತಿನಲ್ಲಿ ಇದನ್ನು ಹೇಳಿಬಿಟ್ಟರೆ ಆಗುವುದಿಲ್ಲ, ಸ್ಪಷ್ಟವಾಗಿ ನಿರ್ಧಾರವಾಗಿ ಹೇಳಿ. ಈ ಎರಡೂ ಸೇತುವೆಗಳು ಇವತ್ತು ಮುರಿದುಬೀಳುವ ಹಾಗಿವೆ. ನಾನು ಮಾನ್ಯ ಶಾಸಕಿಯವರ ಬೇಡಿಕೆಗೆ ಬೆಂಬಲ ಸೂಚಿಸುತ್ತೇನೆ. ಇವುಗಳು ನೂರಾರು ವರ್ಷಗಳ ಹಳೆಯಕಾಲದ ಸೇತುವೆಗಳು. ಇವುಗಳ ದುರಸ್ಥಿ ಕಾರ್ಯ ಮಾಡಬೇಕೆಂದು ಸರ್ಕಾರಕ್ಕೆ ಅನೇಕ ಮನವಿಗಳು ಬಂದಿವೆ. ಈ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಎಂ.ಪಿ. ಪ್ರಕಾಶ್ : ಸನ್ಮಾನ್ಯ ಅಧ್ಯಕ್ಷರೇ, ಈ ಸೇತುವೆಗಳ ನಿರ್ಮಾಣಕ್ಕೇ ಒಂದು ಪ್ರತ್ಯೇಕವಾದಂಥ ನಿಗಮ ಇದೆ ಎಂಬುದು ತಮಗೆ ಗೊತ್ತಿದೆ. ಮಾನ್ಯ ಶಾಸಕಿಯವರು ಬಹಳ ಪ್ರಮುಖವಾದ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಮತ್ತು ಮಾನ್ಯ ಶಾಸಕರೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಅದನ್ನು ಈ ವರ್ಷದಲ್ಲಿ ಸೇರಿಸಿಕೊಳ್ಳತಕ್ಕಂಥಾದ್ದಕ್ಕೆ ತಾವು ಮನವಿಯನ್ನು ಕೊಟ್ಟಾಗ ನಾನು ಲೋಕೋಪಯೋಗಿ ಮಂತ್ರಿಗಳ ಜತೆಗೆ ಮಾತನಾಡಿ ಅದನ್ನು ಸೇರಿಸುವಂತಹ ಎಲ್ಲಾ ಪ್ರಯತ್ನವನ್ನೂ ಮಾಡುತ್ತೇನೆ.

ವಿಷಯ (ಛ) : ಪಶ್ಚಿಮ ಘಟ್ಟದಲ್ಲಿ ಗಾಂಜಾ ಬೆಳೆಯುತ್ತಿರುವ ಬಗ್ಗೆ

ಶ್ರೀಮತಿ ಶಕುಂತಲಾ ಟಿ. ಶೆಟ್ಟಿ (ಪುತ್ತೂರು) : ಮಾನ್ಯ ಅಧ್ಯಕ್ಷರೇ, ಪುತ್ತೂರು ಕ್ಷೇತ್ರ ಪಶ್ಚಿಮ ಘಟ್ಟದ ಬುಡದಿಂದ ಪ್ರಾರಂಭವಾಗುತ್ತದೆ. ಬಹಳಷ್ಟು ಔಷಧೀಯ ಗುಣಗಳಿರುವಂತಹ ಮರಗಳನ್ನು ಹೊಂದಿದ ಆ ಪಶ್ಚಿಮ ಘಟ್ಟದ ಒಳಗಡೆ ಅಂದರೆ ಸಾಧಾರಣ ಶಿರಾಡಿ, ಗುಂಡ್ಯ ಹಾಗೂ ಬೆಳ್ತಂಗಡಿ ತಾಲ್ಲೂಕಿನ ಶಿಶಿಲ, ಶಿವಾಜೆ ಆ ಘಾಟಿ ಬದಿಯಲ್ಲಿ ಹೊರಗಡೆಯೆಲ್ಲಾ ಮರಗಳನ್ನು ಕಾಣುತ್ತಿದ್ದೇವೆ. ಆದರೆ ಒಳಗಡೆಯೆಲ್ಲಾ ಮರಗಳನ್ನು ಕಡಿದು ಕಳೆದ ಮೂರು-ನಾಲ್ಕು ವರ್ಷಗಳಿಂದ ಪರರಾಜ್ಯದ ಜನರು ಬಂದು ಅಲ್ಲಿ ಗಾಂಜಾವನ್ನು ಬೆಳೆಸುತ್ತಿದ್ದಾರೆ. ಅದನ್ನು ತಡೆಯುವಂತಹ ಕೆಲಸವನ್ನು ಈ ತನಕ ಯಾವುದೇ ಸರ್ಕಾರ ಮಾಡಿಲ್ಲ ಎನ್ನಿಸುತ್ತದೆ. ಇನ್ನಾದರೂ ಇದನ್ನು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನೊಂದು ಸುಳ್ಯ ಕ್ಷೇತ್ರದಲ್ಲಿ ಪ್ರಸಿದ್ಧ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನ ಇದೆ. ಅಲ್ಲಿಂದ ನನ್ನ ಪುತ್ತೂರು ಕ್ಷೇತ್ರದ ಮುಖಾಂತರ ಬೆಳ್ತಂಗಡಿ ಕ್ಷೇತ್ರದಲ್ಲಿ ಇರುವುದು